# ಮಕ್ಕಳಲ್ಲಿ ಕ್ಯಾನ್ಸರ್‌ನಿಂದ ಸಾವಿನ ಪ್ರಮಾಣ ಕಡಿಮೆ

ಡಾ. ಎಲ್‌. ಅಪ್ಪಾಜಿ
ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯಲ್ಲಿ ಮಕ್ಕಳ ಕ್ಯಾನ್ಸರ್‌ ತಜ್ಞರು



**• ಮಕ್ಕಳಲ್ಲೂ ಇತ್ತೀಚೆಗೆ ಕ್ಯಾನ್ಸರ್‌ ಕಾಣಿಸಿಕೊಳ್ಳುತ್ತಿದ್ದು, ರೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಇದಕ್ಕೆ ಕಾರಣಗಳೇನು?**

ಹಿಂದೆ ಮಕ್ಕಳಲ್ಲಿ ಕ್ಯಾನ್ಸರ್‌ ಬರುತ್ತಿದ್ದುದು ಬಹಳ ಕಡಿಮೆ. ಈಗೀಗ ಒಂದು ವರ್ಷದ ಮಗುವಿನಿಂದ ಹಿಡಿದು ಹದಿಹರೆಯದ ಹುಡುಗರವರೆಗೆ ಕ್ಯಾನ್ಸರ್‌ ಬಂದು, ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಜೀವಕೋಶ ಜೀವಕಣದಲ್ಲಿ ಆಗುವ ವ್ಯತ್ಯಾಸದಿಂದ ಬರುವ ಮಕ್ಕಳ ಕ್ಯಾನ್ಸರ್‌ಗೆ ಅನುವಂಶೀಯವೇ ಕಾರಣ. ಜೊತೆಗೆ ಜೀನ್ಸ್‌ ಮೂಲಕ ಕ್ಯಾನ್ಸರ್‌ ಕಣಗಳು ಮಕ್ಕಳಿಗೆ ವರ್ಗಾವಣೆಯಾಗುವುದರಿಂದ ಮಕ್ಕಳು ಬಳಲುವಂತಾಗುತ್ತದೆ.

ರೋಗನಿರೋಧಕ ಶಕ್ತಿ ಕಡಿಮೆ ಇರುವ ಮಕ್ಕಳಲ್ಲಿ ಬೇಗನೆ ಬರಬಹುದು. ಕೆಲವೊಂದು ವೈರಸ್‌ಗಳಿಂದಲೂ ಬರಬಹುದು. ವಿಕಿರಣಗಳಿಗೆ ಮೈ ಒಡ್ಡಿಕೊಂಡು ಜೀವಕಣಗಳಿಗೆ ಹಾನಿ ಆದರೂ ಮಕ್ಕಳಲ್ಲಿ ಕ್ಯಾನ್ಸರ್‌ ಬರುವ ಸಾಧ್ಯತೆ ಇದೆ. ಆದರೆ ಮಕ್ಕಳಲ್ಲಿ ಬೇರೆ ಯಾವ ನಿರ್ದಿಷ್ಟ ಕಾರಣಕ್ಕಾಗಿ ಕ್ಯಾನ್ಸರ್‌ ಬರುತ್ತದೆ ಎಂಬುದು ಇನ್ನೂ ನಿಖರವಾಗಿ ತಿಳಿದಿಲ್ಲ. ರೆಟಿನಾ ಕ್ಯಾನ್ಸರ್‌ ಮಾತ್ರ ಮಕ್ಕಳಿಗೆ ಅನುವಂಶೀಯವಾಗಿ ಬರುತ್ತದೆ. ಇದಕ್ಕೆ ಎಪ್‌ಸ್ಟೀನ್‌ ಬಾರ್‌ ವೈರಸ್‌ (epstein bar virus) ಪ್ರಮುಖ ಕಾರಣ.

**• ಮಕ್ಕಳಲ್ಲಿ ಬರುವ ಕ್ಯಾನ್ಸರ್‌ನ ಪ್ರಮುಖ ಲಕ್ಷಣಗಳೇನು?**

ರಕ್ತ ಕ್ಯಾನ್ಸರ್‌ ಆದರೆ ಜ್ವರ, ರಕ್ತಹೀನತೆ, ದೇಹದ ವಿವಿಧ ಭಾಗಗಳಲ್ಲಿ ವಿಪರೀತ ನೋವು ಕಾಣಿಸಿಕೊಳ್ಳಬಹುದು. ಬಾಯಿ, ಮೂಗು, ಚರ್ಮದ ಭಾಗದಲ್ಲಿ ರಕ್ತಸ್ರಾವ, ಮೂತ್ರದಲ್ಲಿ ರಕ್ತ ಹೋಗಬಹುದು. ಕತ್ತು, ಕಂಕುಳು ತೊಡೆ ಸಂದಿಗಳಲ್ಲಿ ಗಂಟುಗಳಾಗಬಹುದು. ಲಿವರ್‌ನಲ್ಲಿ ಊತ ಬರಬಹುದು. ಮೆದುಳಿನ ಕ್ಯಾನ್ಸರ್‌ ಆದರೆ ವಾಂತಿ, ವಿಪರೀತ ತಲೆನೋವು, ದೃಷ್ಟಿಮಂದ, ಫಿಟ್ಸ್‌, ಕಾಲು, ಕೈಗಳ ಸ್ವಾಧೀನ ತಪ್ಪಬಹುದು. ಕಣ್ಣಿನ ಕ್ಯಾನ್ಸರ್‌ ಆದರೆ ಮಕ್ಕಳಲ್ಲಿ ದೃಷ್ಟಿ ಕಡಿಮೆ ಆಗಬಹುದು, ಮೆಳ್ಳೆಗಣ್ಣು ಬರಬಹುದು. ಹೀಗೆ ಬೇರೆ ಬೇರೆ ಕ್ಯಾನ್ಸರ್‌ಗಳಲ್ಲಿ ಬೇರೆ ಬೇರೆ ಲಕ್ಷಣಗಳು ಕಂಡುಬರುತ್ತವೆ.

**• ಮಕ್ಕಳಲ್ಲಿ ಬರುವ ಕ್ಯಾನ್ಸರ್‌ನ ಪತ್ತೆ ಹಾಗೂ ಚಿಕಿತ್ಸಾ ವಿಧಾನ ದೊಡ್ಡವರ ಚಿಕಿತ್ಸೆಗಿಂತ ಭಿನ್ನವಾಗಿರುತ್ತದೆಯೇ?**

ಚಿಕಿತ್ಸಾ ವಿಧಾನ ಒಂದೇ ಆದರೂ ಮಕ್ಕಳಿಗೆ ಹೆಚ್ಚಿನ ಕಾಳಜಿ, ಜಾಗರೂಕತೆ ಅಗತ್ಯ. ರಕ್ತಕ್ಯಾನ್ಸರ್‌ ಆದರೆ ರಕ್ತಪರೀಕ್ಷೆ ಹಾಗೂ ಬೋನ್‌ಮಾರೊ ಟ್ರಾನ್ಸ್‌ಪ್ಲಾಂಟ್‌, ಎಕ್ಸರೇ, ಎಂಆರ್‌ಐ, ಬಯಾಪ್ಸಿ ಮಾಡಿಸಬೇಕು. ಬೇರೆ ಕ್ಯಾನ್ಸರ್‌ಗೂ ಇದೇ ವಿಧಾನ ಅನುಸರಿಸಬಹುದು. ಶಸ್ತ್ರಚಿಕಿತ್ಸೆ, ರೇಡಿಯೇಷನ್‌ (ವಿಕಿರಣ ಚಿಕಿತ್ಸೆ), ಕಿಮೋಥೆರಪಿ (ರಸಾಯನ ಚಿಕಿತ್ಸೆ), ಟಾರ್ಗೆಟೆಡ್‌ ಥೆರಪಿ ಮೂಲಕ ಗುಣಪಡಿಸಬಹುದು.

**• ಸಂಪೂರ್ಣ ಗುಣವಾಗಲು ಎಷ್ಟು ಸಮಯ ತೆಗೆದುಕೊಳ್ಳಬಹುದು?**

ರಕ್ತ ಕ್ಯಾನ್ಸರ್‌ಗೆ ಒಂಬತ್ತರಿಂದ ಎರಡೂವರೆ ವರ್ಷ ಚಿಕಿತ್ಸೆ ಬೇಕು. ಕಣ್ಣಿನ ಕ್ಯಾನ್ಸರ್‌ಗೆ ಆರು ತಿಂಗಳು, ಲಿಂಫೋಮಾ ಆದರೆ ಆರು ತಿಂಗಳು, ಅಂಡಾಣು ಕ್ಯಾನ್ಸರ್‌ಗೆ ಒಂಬತ್ತರಿಂದ 12 ತಿಂಗಳು. ರೋಗಿಯ ಸಾಮರ್ಥ್ಯವನ್ನು ಅನುಸರಿಸಿ ಚಿಕಿತ್ಸೆಯ ಅವಧಿ ನಿಗದಿಗೊಳ್ಳುತ್ತದೆ. 100ರಲ್ಲಿ 10–15 ಮಕ್ಕಳಿಗೆ ಕ್ಯಾನ್ಸರ್‌ ಮರುಕಳಿಸುವ ಸಾಧ್ಯತೆಯೂ ಇದೆ. ■



ಧೂಮಪಾನ ಕ್ಯಾನ್ಸರ್‌ನ ಆಪ್ತಮಿತ್ರ

ಹುಣ್ಣುಗಳು, ತಂಬಾಕು ಬಳಸುವವರೆಲ್ಲ ಬಾಯಿ ಪರೀಕ್ಷೆ ಮಾಡಿಸಿಕೊಳ್ಳಬೇಕು.

## ಪುರುಷರನ್ನು ಕಾಡುವ ಪ್ರಾಸ್ಟೇಟ್‌

ಪ್ರಾಸ್ಟೇಟ್‌ ಗ್ರಂಥಿ ಪುರುಷರ ಜನನಾಂಗದ ಹಿಂಭಾಗದಲ್ಲಿರುವ ಒಂದು ಸೂಕ್ಷ್ಮ ಅಂಗ. ವೀರ್ಯದ ಅಂಶಗಳಲ್ಲಿ ಒಂದಾದ ಪ್ರಾಸ್ಟೇಟ್‌ ದ್ರವವನ್ನು ಸ್ರವಿಸುವುದೇ ಇದರ ಪ್ರಮುಖ ಕೆಲಸ. ಈ ಅಂಗಕ್ಕೂ ಕ್ಯಾನ್ಸರ್‌ ತಗುಲಿದರೆ, ಪುರುಷರನ್ನು ಬಿಟ್ಟೂ ಬಿಡದಂತೆ ಕಾಡುತ್ತದೆ.

ಮೂತ್ರ ವಿಸರ್ಜನೆಯಾಗಲು ಅತಿ ಹೆಚ್ಚು ಸಮಯ ತೆಗೆದುಕೊಳ್ಳುವುದು, ಅತಿ ಕ್ಷೀಣವಾಗಿರುವುದು, ಕೆಲವೊಮ್ಮೆ ಮೂತ್ರ ತಡೆದುಕೊಳ್ಳುವ ಸಾಮರ್ಥ್ಯ ಕಡಿಮೆಯಾಗುವುದು, ಪದೇ ಪದೇ ಮೂತ್ರ ಮಾಡಬೇಕೆನಿಸುವುದು, ಮೂತ್ರಕೋಶ ಸದಾ ತುಂಬಿಕೊಂಡೇ ಇದ್ದಂತಹ ಅನುಭವ – ಇವೆಲ್ಲ ಪ್ರಾಸ್ಟೇಟ್‌ ಕ್ಯಾನ್ಸರ್‌ನ ಆರಂಭಿಕ ಲಕ್ಷಣಗಳು. ಪುರುಷರಲ್ಲಿ ನಿಮಿರು ದೌರ್ಬಲ್ಯ ಉಂಟಾಗುವುದು ಕೂಡ ಪ್ರಾಸ್ಟೇಟ್‌ ಗ್ರಂಥಿಯ ಕ್ಯಾನ್ಸರ್‌ನ ಲಕ್ಷಣವೇ ಆಗಿದೆ.

ಪ್ರಾಸ್ಟೇಟ್‌ ಕ್ಯಾನ್ಸರ್‌ನ ಬೆಳವಣಿಗೆ ತೀರಾ ನಿಧಾನ. ರೋಗಿಗೆ ಈ ಬಗ್ಗೆ ಮೊದಮೊದಲು ಗೊತ್ತಾಗುವುದೇ ಇಲ್ಲ. ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯರನ್ನು ಕಾಣಬೇಕು. ಇದೇ ರೀತಿ ಕೋಲನ್‌ ಕ್ಯಾನ್ಸರ್‌ ಕೂಡ ಈಗೀಗ ಹೆಚ್ಚುತ್ತಿದ್ದು ಸೂಕ್ತ ಚಿಕಿತ್ಸೆಯಿಂದ ಪ್ರಯೋಜನ ಪಡೆಯಬಹುದು.

## ಕಂದಮ್ಮಗಳಿಗೂ ತಪ್ಪಿಲ್ಲ ಭೀತಿ

ಅಮ್ಮನ ಬೆಚ್ಚನೆಯ ಮಡಿಲಲ್ಲೋ, ಅಪ್ಪನ ತೆಕ್ಕೆಯಲ್ಲೋ, ಅಜ್ಜಿಯ ತೊಡೆಯಲ್ಲೋ ಅಥವಾ